

ಸಾಹಿತ್ಯ ಮತ್ತು ವಿಜ್ಞಾನ ಎರಡೂ ಒಂದಕ್ಕೊಂದು ಸಂಬಂಧವೇ ಇಲ್ಲದ ಕಂಪಾರ್ಟ್‌ಮೆಂಟುಗಳು ಎಂಬ ಧೋರಣೆ ಹಲವರಲ್ಲಿದೆ. ಇದು ಎಷ್ಟು ಸತ್ಯ? ಸಾಹಿತ್ಯ ಅಥವಾ ಇನ್ನಾವುದೇ ಕಲೆಗಳ ಸೃಷ್ಟಿಕ್ರಿಯೆಯಲ್ಲಿ ತೊಡಗಿರುವವರು ವಿಜ್ಞಾನ ನಮ್ಮ ಬದುಕನ್ನು ಆವರಿಸಿರುವ ರೀತಿಗೆ ಹೇಗೆ ಪ್ರತಿಸ್ಪಂದಿಸುತ್ತಾರೆ ಎಂಬುದನ್ನು ಅರಿಯುವ ಪ್ರಯತ್ನ ಈ ಸಂಚಿಕೆಯ ವಿಶೇಷ. ಇಲ್ಲಿನ ಕಿರುಬರಹಗಳ ಗುಚ್ಛ ಸಹೃದಯರಿಗೆ ಹೊಸಬಗೆಯ ನೋಟವೊಂದನ್ನು ನೀಡಬಹುದು ಎಂಬ ನಂಬಿಕೆ ನಮ್ಮದು. ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳ ನಡುವಣ ಸಂಬಂಧ ಯಾವ ಬಗೆಯದು ಎನ್ನುವ ಜಿಜ್ಞಾಸೆಯಲ್ಲಿ ಪ್ರಶ್ನೆಗಳ ಪಟ್ಟಿಯೊಂದನ್ನು ಕನ್ನಡದ ಆಯ್ದ ಬರಹಗಾರರಿಗೆ ಕಳುಹಿಸಿಕೊಟ್ಟೆವು. ಆ ಪ್ರಶ್ನೆಗಳ ನೆಪದಲ್ಲಿ, ನಮ್ಮ ಬದುಕು ಮತ್ತು ಸಮಾಜದ ಒಳಹೊರಗೆ ಸೇರಿಕೊಂಡಿರುವ ವಿಜ್ಞಾನದ ವಿವಿಧ ಮುಖಗಳ ಅವಲೋಕನ ಇಲ್ಲಿದೆ. ಸಾಹಿತ್ಯ–ವಿಜ್ಞಾನದ ಈ ಜುಗಲಬಂದಿ, ಫೆಬ್ರುವರಿ 28ರ ‘ವಿಜ್ಞಾನ ದಿನಾಚರಣೆ’ ವಿಶೇಷ.

## ಪ್ರಶ್ನೆಗಳು

- ಇಡೀ ಜಗತ್ತು ವಿಜ್ಞಾನ ತಂತ್ರಜ್ಞಾನದ ಬಿಗಿಮುಷ್ಟಿಯಲ್ಲಿರುವಾಗ ಕನ್ನಡ ಸಾಹಿತ್ಯ ಕ್ಷೇತ್ರ ಇದನ್ನು ಹೇಗೆ ನೋಡುತ್ತದೆ?
- ಅಕ್ಷರಸ್ಥರು – ಅನಕ್ಷರಸ್ಥರ ನಡುವಿನ ಗೆರೆಯನ್ನು ತಂತ್ರಜ್ಞಾನ ಅಳಿಸಿಹಾಕಿಬಿಟ್ಟಿದೆ. ಉದಾಹರಣೆಗೆ, ಮೊಬೈಲ್ ಬಳಕೆ. ಇಂಥ ಕ್ರಾಂತಿಯನ್ನು ಸಮಾಜವಿಜ್ಞಾನಿಗಳಾಗಲಿ, ಚರಿತ್ರೆಕಾರರಾಗಲಿ ಅಥವಾ ಸಾಹಿತಿಗಳಾಗಲಿ, ರಾಜಕಾರಣಿಗಳಾಗಲಿ ಮಾಡಲಾಗಲಿಲ್ಲ ಏಕೆ?
- ವಿಜ್ಞಾನ ತಂತ್ರಜ್ಞಾನದ ಓಟಕ್ಕೆ ಲಗಾಮು ಹಾಕಬೇಕೆ? ಹಾಗೆ ಮಾಡಿದ್ದೇ ಆದರೆ ನಮ್ಮ ಲೌಕಿಕ ಪ್ರಗತಿಗೆ ಹಿನ್ನಡೆಯಾಗುತ್ತದೆಯೆ?
- ಎಲ್ಲ ವಿಜ್ಞಾನ ತಂತ್ರಜ್ಞಾನಗಳ ಸಂಶೋಧನೆಗಳು ಸಮಾಜಮುಖಿಯಾಗಬೇಕೆ? ಉದಾಹರಣೆಗೆ, ವಿಶ್ವದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಕೂಡ ಮನುಜಮತಿಗೆ ಬೇಕಲ್ಲವೆ?
- ಸಾಹಿತ್ಯ ಮತ್ತು ವಿಜ್ಞಾನದ ಸಂಬಂಧ ಹೇಗಿರಬೇಕು? ತಂತ್ರಜ್ಞಾನ ಸಾಹಿತ್ಯದ ಪ್ರಕಟಣೆಗೆ ವರರೂಪಿ ಆಗಿದೆಯಲ್ಲವೆ?
- ಡಿಜಟಲೀಕರಣ ನಮ್ಮ ಪ್ರಾಚೀನ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಉಳಿಸಲು ಅತ್ಯಂತ ಶಕ್ತಿಯುತ ಸಾಧನೆಯಾಗಿ ಮೂಡಿಬಂದಿದೆಯಲ್ಲವೆ? ಕನ್ನಡ ಸಾಹಿತಿಗಳೇಕೆ ವಿಜ್ಞಾನ ತಂತ್ರಜ್ಞಾನದ ಚರ್ಚೆಯಿಂದ ಆಚೆಗೆ ಉಳಿದಿದ್ದಾರೆ?
- ಕನ್ನಡ ಅನ್ನದ ಭಾಷೆಯಾಗಬೇಕು ಎನ್ನುವಾಗ ತಂತ್ರಜ್ಞಾನ ಸೃಷ್ಟಿಸಿರುವ ಅನೇಕ ಉದ್ಯೋಗಾವಕಾಶಗಳನ್ನು ಸಾಹಿತಿಗಳು ಏಕೆ ಪರಿಗಣಿಸುತ್ತಿಲ್ಲ? ಉದಾ: ಕನ್ನಡದಲ್ಲಿ ಡಿ.ಟಿ.ಪಿ. ಸೃಷ್ಟಿಸಿರುವ ಅವಕಾಶ ಕರ್ನಾಟಕದಲ್ಲೇ ಸಹಸ್ರಾರು ಮಂದಿಗೆ ಉದ್ಯೋಗ ಕೊಡುತ್ತಿಲ್ಲವೆ?
- ಪ್ರತಿಬಾರಿಯೂ ನಾವು ವೈಜ್ಞಾನಿಕ ಮನೋಭಾವ ಎನ್ನುವುದನ್ನು ಬಾಯಿ ಮಾತಿನಲ್ಲೇ ಹೇಳುತ್ತಿದ್ದೇವೆ. ಕರ್ನಾಟಕದ ಶೇ.99 ಭಾಗ ಟಿ.ವಿ. ಚಾನಲ್‌ಗಳು ಜ್ಯೋತಿಷಿಗಳಿಂದಲೇ ದಿನದ ಕಾರ್ಯಕ್ರಮವನ್ನು ಪ್ರಾರಂಭಿಸುತ್ತವೆ. ಇದನ್ನು ಸಾಹಿತಿಗಳೇಕೆ ವಿರೋಧಿಸುತ್ತಿಲ್ಲ?
- ಕನ್ನಡದಲ್ಲಿ ಯಾವ ಬಗೆಯ ವೈಜ್ಞಾನಿಕ ಸಾಹಿತ್ಯ ಬರಬೇಕೆಂದು ಸಾಹಿತಿಗಳು ಬಯಸುತ್ತಾರೆ?

ಪರಿಕಲ್ಪನೆ: ಟಿ.ಆರ್. ಅನಂತರಾಮು
ನಿರ್ವಹಣೆ: ಪದ್ಮನಾಭ ಭಟ್